# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1603

ಸದಸ್ಯರ ಹೆಸರು : ಶ್ರೀ ಸಿ.ಎನ್. ಮಂಜೇಗೌಡ

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸುವ ದಿನಾಂಕ : 11.03.2022.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯ ಸರ್ಕಾರದ ಸಾರಿಗೆ ಸಂಸ್ಥೆಯಾದ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿ.ಎಂ.ಟಿ.ಸಿ)ಯು ನಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; | ಸರ್ಕಾರದ ಗಮನಕ್ಕೆ ಬಂದಿದೆ.<br>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಕಳೆದ 05 ವರ್ಷಗಳಲ್ಲಿ ಅನುಭವಿಸಿರುವ ನಷ್ಟದ ವಿವರ ಈ ಕೆಳಕಂಡಂತಿದೆ:- |
| ಆ. | ಹಾಗಿದ್ದಲ್ಲ, ಕಳೆದ 5 ವರ್ಷದಲ್ಲಿ ಆದ ನಷ್ಟವೆಷ್ಟು; ಮತ್ತು ನಷ್ಟಕ್ಕೆ ಕಾರಣಗಳೇನು; (ವರ್ಷಾವಾರು ಅಂಕಿ ಅಂಶಗಳನ್ನು ನೀಡುವುದು) | (ರೂ.ಲಕ್ಷಗಳಲ್ಲಿ)<br>ವರ್ಷ / ನಷ್ಟದ ಮೊತ್ತ<br>2016-17 / 26091.01<br>2017-18 / 21761.46<br>2018-19 / 34948.74<br>2019-20 / 54934.33<br>2020-21 (ಪ್ರಾವಿಷನಲ್) / 16419.98<br>ಒಟ್ಟು / **154155.52**<br><br>ಸಂಸ್ಥೆಯ ಒಟ್ಟಾರೆ ವೆಚ್ಚದಲ್ಲಿ ಸುಮಾರು ಶೇ.80ರಷ್ಟು ಪಾಲು ಸಿಬ್ಬಂದಿ ವೆಚ್ಚ ಮತ್ತು ಇಂಧನ ವೆಚ್ಚಗಳಾಗಿರುತ್ತದೆ. ಸಂಸ್ಥೆಯು ನಷ್ಟವನ್ನು ಅನುಭವಿಸಲು ಈ ಕೆಳಗಿನ ಅಂಶಗಳು ಪ್ರಮುಖ ಕಾರಣವಾಗಿರುತ್ತದೆ.<br>• ಬೆಂ.ಮ.ಸಾ.ಸಂಸ್ಥೆಯಲ್ಲಿ ಕಳೆದ 07 ವರ್ಷಗಳಿಂದ ಬಸ್ ದರ ಪರಿಷ್ಕರಣೆ ಮಾಡಿರುವುದಿಲ್ಲ.<br>• ಪ್ರತಿ ಮಾಹೆ ಹೆಚ್ಚಾಗುತ್ತಿರುವ ಇಂಧನ ದರದಿಂದಾಗಿ ಅಧಿಕವಾಗುತ್ತಿರುವ ಇಂಧನ ವೆಚ್ಚ.<br>• ಉಗ್ರಾಣ ಸಾಮಗ್ರಿಗಳ ವೆಚ್ಚ ಹೆಚ್ಚಾಗಿರುವುದು. |



Generated from eOffice by B SREERAMULU, TD-MIN(BS), TRANSPORT MINISTER, Trans on 10/03/2022 08:51 PM

| | | |
|---|---|---|
| | | • ಸಂಸ್ಥೆಯ ವಾಹನಗಳಲ್ಲಿ ಸಂಚರಿಸುತ್ತಿದ್ದ ಅಂದಾಜು ಸುಮಾರು 5 ಲಕ್ಷದಷ್ಟು ಪ್ರಯಾಣಿಕರು ನಮ್ಮ ಮೆಟ್ರೋ ರೈಲಿಗೆ ವರ್ಗಾವಣೆಗೊಂಡ ಅನುಸಾರ ಸಾರಿಗೆ ಆದಾಯ ಗಳಿಕೆಯಲ್ಲಿ ಇಳಿಮುಖವಾಗಿರುತ್ತದೆ.<br>• ಬೆಂಗಳೂರು ಮಹಾನಗರದಲ್ಲಿ ಓಲಾ, ಊಬರ್, ಇತರೇ ಕ್ಯಾಬ್‌ಗಳ ಕಾರ್ಯಾಚರಣೆಯಿಂದಾಗಿ ಸಾರಿಗೆ ಆದಾಯದ ಗಳಿಕೆಯಲ್ಲಿ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ.<br>• ಸಂಸ್ಥೆಯು ಬೆಂಗಳೂರು ನಗರಕ್ಕೆ ಸಾರಿಗೆ ಸೌಲಭ್ಯ ಒದಗಿಸಲು ಏಕಸ್ವಾಮ್ಯತೆಯನ್ನು ಹೊಂದಿರುತ್ತದೆ. ನಗರದಲ್ಲಿ ದಿನೇ ದಿನೇ ಖಾಸಗಿ ವಾಹನಗಳ ಸಂಖ್ಯೆಯು ಹೆಚ್ಚಾಗಿ ಸಂಚಾರ ದಟ್ಟಣೆ ಉಂಟಾಗುತ್ತಿದ್ದು, ಸಂಸ್ಥೆಯ ಭೌತಿಕ ಅಂಶಗಳ ಗುರಿಯನ್ನು ಸಾಧಿಸಲು ಕಷ್ಟಸಾಧ್ಯವಾಗಿರುತ್ತದೆ. ಆದ್ದರಿಂದ ಹೆಚ್ಚಿನ ನಷ್ಟವನ್ನು ಅನುಭವಿಸುತ್ತಿದೆ.<br>• ಸಂಚಾರ ದಟ್ಟಣೆಯಿಂದ ನಿಗದಿತ ಕಿ.ಮೀ.ಗಳ ಆಚರಣೆ ಕಷ್ಟಸಾಧ್ಯವಾಗಿದ್ದು, ವಾಹನಗಳ ಬಳಕೆ (Vehicle Utilization) ಕಡಿಮೆಯಾಗಿರುತ್ತದೆ.<br>• ಮಾರ್ಚ್-2020ರಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗದಿಂದಾಗಿ ಪ್ರಯಾಣಿಕರು ಸಾರ್ವಜನಿಕ ಬಸ್ ಬಳಕೆಯನ್ನು ಕಡಿಮೆಗೊಳಿಸಿರುತ್ತಾರೆ. |
| ಇ. | ಹೆಚ್ಚು ನಷ್ಟದಲ್ಲಿದ್ದರೂ ಸಹ ಬಿ.ಎಸ್-6 ಮಾದರಿಯ ಬಸ್ಸುಗಳನ್ನು ಖರೀದಿಸಲು ಸರ್ಕಾರ ಮುಂದಾಗಿರುವುದು ಸರಿಯೇ; ಎಷ್ಟು ಬಸ್ಸುಗಳನ್ನು ಖರೀದಿಸಲಾಗುತ್ತಿದೆ ಹಾಗೂ ಅವುಗಳ ಒಟ್ಟು ಮೊತ್ತವೆಷ್ಟು? (ಪ್ರತಿ ಬಸ್ಸಿನ ಬೆಲೆಯೊಂದಿಗೆ ಮಾಹಿತಿ ನೀಡುವುದು) | ಬೆಂ.ಮ.ಸಾ.ಸಂಸ್ಥೆಯು ಸಾಮಾಜಿಕ ಹೊಣೆಗಾರಿಕೆಯೊಂದಿಗೆ ಸಾರ್ವಜನಿಕರಿಗೆ ಉತ್ತಮ ಸಾರಿಗೆ ಸೌಕರ್ಯವನ್ನು ಒದಗಿಸಲು ಕಾರ್ಯ ನಿರ್ವಹಿಸುತ್ತಿದ್ದು ಸಂಸ್ಥೆಯ ಆಡಳಿತ, ಸಿಬ್ಬಂದಿ, ಇಂಧನ, ಇನ್ನಿತರೆ ವೆಚ್ಚವನ್ನು ನಿರ್ವಹಿಸಲು ಸಾರಿಗೆ ಮತ್ತು ಸಾರಿಗೇತರ ಆದಾಯವನ್ನೂ ಸಹ ಪರಿಗಣಿಸಬೇಕಾಗಿರುತ್ತದೆ.<br><br>ಸಾರ್ವಜನಿಕರಿಗೆ ಉತ್ತ ಗುಣಮಟ್ಟದ ಸಾರಿಗೆ ಸೌಲಭ್ಯವನ್ನು ಕಲ್ಪಿಸಲು ಸಂಸ್ಥೆಯಲ್ಲಿನ ಹಳೆಯ ವಾಹನಗಳನ್ನು ಬದಲಾಯಿಸಿ, ಹೊಸ ಬಸ್ಸುಗಳನ್ನು ಖರೀದಿಸುವ ಅವಶ್ಯವಿರುತ್ತದೆ. ಈ ಹಿನ್ನೆಲೆಯಲ್ಲಿ 2017-18ನೇ ಸಾಲಿನ ಆಯವ್ಯಯದಲ್ಲಿ 1500 ಬಸ್ಸುಗಳನ್ನು ಖರೀದಿಸಲು ಬೆಂ.ಮ.ಸಾ.ಸಂಸ್ಥೆಗೆ ರೂ.450.00 ಕೋಟಿ ಅನುದಾನವನ್ನು ಒದಗಿಸಲಾಗಿರುತ್ತದೆ. ಕಳೆದ ವರ್ಷಗಳಲ್ಲಿ 857 |



Generated from eOffice by B SREERAMULU, TD-MIN(BS), TRANSPORT MINISTER, Trans on 10/03/2022 08:51 PM

| | | |
|---|---|---|
| | | ಬಸ್ಸುಗಳನ್ನು ಖರೀದಿಸಲಾಗಿದ್ದು, ಸದರಿ ಅನುದಾನಲ್ಲಿ ರೂ.191.08 ಕೋಟಿ ಬಾಕಿ ಉಳಿದಿರುತ್ತದೆ. ಹಾಲಿ ಸಂಸ್ಥೆಯಲ್ಲಿರುವ ವಯೋಮಿತಿ ಮೀರಿರುವ ಹಳೆಯ ಬಸ್ಸುಗಳನ್ನು ಬದಲಾಯಿಸುವ ಸಲುವಾಗಿ, ಉಳಿದ ಅನುದಾನದ ಮೊತ್ತದಲ್ಲಿ 2021-22ನೇ ಸಾಲಿನಲ್ಲಿ 565 ಬಿ.ಎಸ್-6 ಲೇಲ್ಯಾಂಡ್ ಡೀಸೆಲ್ ಬಸ್ಸುಗಳನ್ನು ಖರೀದಿಸಲಾಗಿರುತ್ತದೆ. ಪ್ರತಿ ಬಸ್ಸಿಗೆ ರೂ.33,82,000/- ರಂತೆ 565 ಬಸ್ಸುಗಳಿಗೆ ರೂ.191.08 ಕೋಟಿ ವೆಚ್ಚವಾಗಿರುತ್ತದೆ. |

ಸಂಖ್ಯೆ: ಟಿಡಿ 74 ಟಿಸಿಕ್ಯೂ 2022

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು



Generated from eOffice by B SREERAMULU, TD-MIN(BS), TRANSPORT MINISTER, Trans on 10/03/2022 08:51 PM